**<u>ಸಾಕ್ಷಿಯನ್ನು ದಿಃ 17.11.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಸಿ.ಎಸ್.ಎಸ್ ವಕೀಲರಿಂದಃ–</u>**

ನಾನು ಮೊದಲನೆ ಬಾರಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯುವಾಗ ಯಾವುದೆ ದಾಖಲೆಗಳನ್ನು ಹಾಜರು ಪಡಿಸಿರಲಿಲ್ಲ. ನಿಡಿ. 1 ದಾಖಲೆಯನ್ನು ಸಾಮಿಲ್ ಪ್ರಾಂಭಿಸಿರುವ ಬಗ್ಗೆ ತಿಳಿಸಲು ಹಾಜರು ಪಡಿಸಿದ್ದೇನೆ. ಆಸ್ತಿ ನಂ.1256/15 ರ ಸ್ವತ್ತಿನಲ್ಲಿ ನೀರಿನ ಸಂಪರ್ಕ ಪಡೆದ ಬಗ್ಗೆ ಹಾಗೂ ಕಂದಾಯವನ್ನು ತಂದೆ ಹೆಸರಿನಲ್ಲಿ ಕಟ್ಟದ ಬಗ್ಗೆ ತೋರಿಸಲು ನಿಡಿ. 2 ರ ದಾಖಲೆಯನ್ನು ಹಾಜರು ಪಡಿಸಿದ್ದೇನೆ. ನಿಡಿ. 2 ರ ದಾಖಲೆಯಲ್ಲಿ ಖಾತೆ ನಂ. 1256/15 ಎಂದು ಇರುವುದಿಲ್ಲ. ನಿಡಿ. 3 ರ ದಾಖಲೆಯನ್ನು ಖಾತೆ ನಂ. 1256/13 ರಲ್ಲಿ ಸಾಮಿಲ್ ನಡೆಸುತ್ತಿರುವ ಬಗ್ಗೆ ತೋರಿಸಲು ಹಾಜರು ಪಡಿಸಿದ್ದೇನೆ. ನಿಡಿ. 3 ರಲ್ಲಿ ಖಾತಾ ಸಂಖ್ಯೆ 1256/13 ಎಂದು ನಮೂದು ಇರುವುದಿಲ್ಲ. ನಿಡಿ. 4 ರಿಂದ 6 ರ ಕಂದಾಯ ಪಾವತಿ ರಶೀದಿ ಗಳನ್ನು ನನ್ನ ತಾಯಿ ಕಟ್ಟಿರುತ್ತಾರೆ. ಅದರಲ್ಲಿ ತೋರಿಸಿರುವ ಮಾಲೀಕರಾದ ವಾದಿಗಳ ಹೆಸರುಗಳು ಇರುತ್ತವೆ ಅವರ ಹೆಸರಿನಲ್ಲಿ ನಾವು ಸ್ವಾಧೀನದಲ್ಲಿ ಇದ್ದ ಕಾರಣ ಅವರ ಹೆಸರಿನಲ್ಲಿ ಕಂದಾಯ ಕಟ್ಟಿರುತ್ತೇವೆ. ವಾದಿಗಳು ಕಂದಾಯ ಕಟ್ಟುವಂತೆ ನನಗೆ ಸೂಚಿಸಿಲ್ಲ.

ದಿಃ 03.12.2012 ರ ಹಿಂದೆ ಆಗಲಿ ಅದರ ನಂತರವಾಗಲಿ ಕಂದಾಯ ಕಟ್ಟಿದ್ಧ ರಶೀದಿಗಳು ಇರುವುದಿಲ್ಲ. ನಾವು ಇಟ್ಟಿರುವ ಶಾಮಿಲ್ ನಲ್ಲಿ ಮರ ಕಟ್ ಮಾಡುತ್ತಿರುವುದು ನಿಡಿ. 7 ರಿಂದ 32 ರ ಪೋಟೊಗಳಲ್ಲಿ ಕಾಣಿಸುತ್ತಿವೆ. ನಿಡಿ. 33 ರ ಪತ್ರಿಕೆಯನ್ನು ಯಾವ ಕಾರಣಕ್ಕೆ ಹಾಜರು ಪಡಿಸಿದ್ದಿರಾ ಎಂದರೆ ವಾದಿಯವರು ನಮಗೆ ಬೆದರಿಕೆ ಹಾಕಿದ್ದು, ಆ ಸಂದರ್ಭ ದೂರು ಕೊಡಲು ಹೋದಾಗ ಮಿಡಿಯಾದವರು ಅದನ್ನು ಪ್ರಚೂರ ಪಡಿಸಿದ ಬಗ್ಗೆ ತೋರಿಸಲು ಹಾಜರು ಪಡಿಸಿದ್ದೇನೆ ಎನ್ನುತ್ತಾರೆ. ನಾನು ಹಾಜರು ಪಡಿಸಿರುವ ದಾಖಲೆಗಳಲ್ಲಿ ದಾವಾ ಸ್ವತ್ತಿನ ಮಾಲೀಕರು ನಾವೆ ಎಂದು ತೋರಿಸಲು ಯಾವುದೆ ದಾಖಲೆ ಇಲ್ಲ ಎಂದರೆ ಸಾಕ್ಷಿ ಆ ಬಗ್ಗೆ ಉತ್ತರಿಸಿರುವುದಿಲ್ಲ ಅದರೆ ತಾವೇ ಸ್ವಾಧೀನದಲ್ಲಿ ಇದ್ದೇವೆ ಎಂದು ತೋರಿಸಲು ಅದನ್ನು ಹಾಜರು ಪಡಿಸಿದ್ದೇವೆ ಎಂದು ನುಡಿಯುತ್ತಾರೆ.

ನಿಡಿ. 34 ರ ಸೇಲ್ ಡೀಡ್ ನಾವು ಖರೀದಿಸಿದ ಆಸ್ತಿ ದಾಖಲೆ ಅಲ್ಲ ಎಂದರೆ ಸರಿಯಲ್ಲ. ಸದರಿ ಸೇಲ್ ಡೀಡ್ ನಲ್ಲಿ ತೋರಿಸಿರುವ ಆಸ್ತಿ ನಂ.1256/16 ಆಗಿರುತ್ತದೆ. ಸದರಿ ಆಸ್ತಿಯನ್ನು ಮುನಿಸಿಪಾರ್ಟಿ ರವರ ಹರಾಜಿನಲ್ಲಿ ಖರೀದಿಸಿ ಅದನ್ನು ನಮಗೆ ಮಾರಾಟ ಮಾಡಿರುತ್ತಾರೆ. ಬಾಬು ಜಾನ್ ಎಂಬುವವರಿಗೆ ಮುನಿಸಿಪಾರ್ಟಿ ಎಂದ ಹರಾರಿಜಿಗೆ ಬಂದಿತ್ತು, ಅವರು ವಾರಸುದಾರರು ನಮಗೆ ಕ್ರಯ ಪತ್ರ ಬರೆದುಕೊಟ್ಟಿರುತ್ತಾರೆ. ಬಾಬು ಜಾನ್ ರವರಿಗೆ ಮುನಸಿಪಾರ್ಟಿ ಯಿಂದ ಹರಾಜಿನಲ್ಲಿ ಬಂದಂತಹ ಪತ್ರ ಎಲ್ಲಿದೆ ಎಂದರೆ ಸಾಕ್ಷಿ ನನ್ನ ತಾಯಿ ಎಲ್ಲೊ ಇಟ್ಟಿರುತ್ತಾರೆ, ಅದನ್ನು ಹುಡುಕಬೇಕು ಎನ್ನುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ತಂದು ಹಾಜರು ಪಡಿಸಲು ನನಗೇನು ತೊಂದರೆ ಇಲ್ಲ. ಸದರಿ ದಾಖಲೆಯನ್ನು ಹಾಜರು ಪಡಿಸಿದರೆ ಯಾವ ಆಸ್ತಿಯನ್ನು ಬಾಬು ಜಾನ್ ರವರಿಗೆ ಮುನಸಿಪಾರ್ಟಿ ರವರು ಕೊಟ್ಟಿರುತ್ತಾರೆ ಎಂದು ಗೊತ್ತಾಗುತ್ತದೆ ಎಂದರೆ ಸರಿ. ಸದರಿ ದಾಖಲೆಯಲ್ಲಿರುವ ಚೆಕ್ಕುಬಂದಿ ಮತ್ತು ನಮಗೆ ಮಾರಾಟ ಮಾಡಿದ ಆಸ್ತಿಯ ಚಕ್ಕುಬಂದಿ ಒಂದೇ ಆಗಿದ್ದರೆ ಬಾಬು ಜಾನ್ ರವರ ವಾರಸುದಾರರು ನಮಗೆ ಮಾರಾಟ ಮಾಡಿರುವುದು ಸಾಬೀತಾಗುತ್ತದೆ ಎಂದರೆ ಸರಿ.

ನಿಡಿ. 34 ರ ಸೇಲ್ ಡೀಡ್ ನ ಚಕ್ಕುಬಂದಿಯಲ್ಲಿ ಪೂರ್ವಕ್ಕೆ ಪ್ಯಾರೇಜಾನ್ ರವರ ಕುಟುಂಬದ ಖಾಲಿ ನಿವೇಶನ ಎಂದು ಇದೆ ಎಂದರೆ ಸರಿ,ಅದರೆ ಈಗ ಅವರ ಸ್ವತ್ತು ಇಲ್ಲ, ಸುನಿತ ಮತ್ತು ಜಯರಾಮ್ ರವರ ಆಸ್ತಿ ಇರುತ್ತದೆ. ಅದು ಆದ ನಂತರ ಶಿವಣ್ಣ ನವರ ಮನೆ ಇದೆ. ಪಶ್ಚಿಮಕ್ಕೆ ಮುರಳೀಧರ ರವರ ಖಾಲಿ ನಿವೇಶನ ಇದೆ ಎಂದರೆ ಈಗ ಜೀವನ್ ಕಾಜಲ್ ರವರ ಮನೆ ಇದೆ ಎನ್ನುತ್ತಾರೆ. ದಕ್ಷಿಣಕ್ಕೆ ಖಾತೆ ನಂ.1256/13 ರಲ್ಲಿ ನಮ್ಮ ತಂದೆ ಖರೀದಿಸಿದ ಜಾಗ ಇದೆ. ಸದರಿ ಜಾಗವನ್ನು ನಮ್ಮ ತಂದೆ ಖರೀದಿಸಿದ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿಲ್ಲ. 1984 ರಲ್ಲಿ ಖಾತೆ ನಂ.1256/13 ನನ್ನ ತಂದೆ ಪ್ಯಾರೇಜಾನ್ ಅಲಿಯಾಸ್ ಮುಸ್ತಫಾ ಖಾನ್ ರವರಿಂದ ಖರೀಸಿದ್ದರು, ಆದರೆ ತಾರೀಖು ತಿಂಗಳು ನೆನಪಿಲ್ಲ. ಸದರಿ ಪತ್ರ ನಮ್ಮ ಬಳಿಯೇ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ, ಕೊಡುತ್ತೇನೆ. ಉತ್ತರಕ್ಕೆ ಖಾತೆ ನಂ. 1256/15 ರ ನಾವು ಸ್ವಾಧೀನದಲ್ಲಿ ಇರುವಂತಹ ಖಾಲಿ ನಿವೇಶನ ಇದೆ. ಸದರಿ ಸ್ವತ್ತು ನಮ್ಮ ಸ್ವಾಧೀನದಲ್ಲಿ ಇದೆ ಎಂದು

ತೋರಿಸಲು ದಾಖಲೆ ಇದೆಯಾ ಎಂದರೆ ನೀರಿನ ಕಂದಾಯ ಮತ್ತು ಆಸ್ತಿ ಕಂದಾಯ ಕಟ್ಟಿದ ದಾಖಲೆಗಳನ್ನು ಹಾಜರು ಪಡಿಸಿದ್ದೇನೆ ಎನ್ನುತ್ತಾರೆ. ಖಾತೆ ನಂ. 1256/11, 1256/12 ಮತ್ತು 1256/15, ಆಸ್ತಿಗಳು ನಮಗೆ ಸೇರಿದ್ದು ಎಂದು ತೋರಿಸಲು ಹಕ್ಕು ಪತ್ರದ ದಾಖಲೆಗಳನ್ನು ಕೊಟ್ಟಿದ್ದಿರಾ ಎಂದರೆ ನನಗೆ ಗೊತ್ತಿಲ್ಲ. ಆಸ್ತಿಗಳಿಗೆ ಸಂಬಂಧಿಸಿದಂತೆ ಯಾವುದೆ ಹಕ್ಕು ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ನಿಡಿ. 34 ರ ಅಸ್ತಿಯ ಪೂರ್ವಕ್ಕೆ ಡಿ. ಸೂರ್ಯನಾರಾಯಣ್ ರಾವ್ ರವರಿಗೆ ಸೇರಿದ ಆಸ್ತಿ ಇದ್ದು, ಈಗ ಶಿವಣ್ಣನವರ ಹೆಂಡತಿ ಪುಷ್ಪಲತಾ ರವರಿಗೆ ಸೇರಿದ ಆಸ್ತಿ ಆಗಿದೆ ಎಂದರೆ ಸರಿ. ದಕ್ಷಿಣಕ್ಕೆ ಸೈಟ್ ನಂ. 1256/11 ಇದೆ ಎಂದರೆ ಸರಿ. ಉತ್ತರಕ್ಕೆ ರಸ್ತೆ ಇದೆ ಎಂದರೆ ಸರಿ. ಅದೆ ರೀತಿ ಪಶ್ಚಿಮಕ್ಕೆ ಸೈಟ್ ನಂ. 1256/15 ಖಾಲಿ ನಿವೇಶನ ಇದೆ ಎಂದರೆ ಸರಿ. ನಿಡಿ. 34 ರಲ್ಲಿ ಸುಳ್ಳು ಚಕ್ಕುಬಂದಿಯನ್ನು ನಮೂದಿಸಿ ಸುಳ್ಳು ದಾಖಲೆ ಬರೆಸಿಕೊಂಡಿದ್ದೆ ಎಂದರೆ ಸರಿಯಲ್ಲ. ಬಾಬು ಜಾನ್ ರವರಿಗೆ ಮುನಸಿಪಾರ್ಟಿ ರವರಿಂದ ಕೊಟ್ಟ ಹಕ್ಕು ಪತ್ರ ಹಾಜರು ಪಡಿಸಿದರೆ ನಿಡಿ. 34 ರ ದಾಖಲೆ ಸುಳ್ಳು ಪತ್ರ ಎಂದು ಗೊತ್ತಾಗುತ್ತದೆ ಎಂದು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ದಾಖಲೆ ಹಾಜರು ಪಡಿಸುತ್ತೇನೆ ಎನ್ನುತ್ತಾರೆ. ಪ್ಯಾರೇಜಾನ್ ರವರು ನನ್ನ ತಾಯಿಗಾಗಲಿ ಅಥವಾ ನನ್ನ ತಂದೆಗಾಗಲಿ ಯಾವುದೆ ಆಸ್ತಿಯನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಹಾಗೆ ಬರೆದುಕೊಟ್ಟಿದ್ದರೆ ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತಿದ್ದೆ ಎಂದರೆ ಹೌದು ಎನ್ನುತ್ತಾರೆ. ಸಾಕ್ಷಿ ಪುನಃ ಅನ್ನೊಂದು ನ್ಯಾಯಾಲಯದಲ್ಲಿ ಇರಬಹುದು, ಆ ಕೇಸ್ ನಲ್ಲಿ ನನ್ನ ತಾಯಿ ಏನೇಲ್ಲಾ ದಾಖಲೆಗಳನ್ನು ಕೊಟ್ಟಿದ್ದಾರೆ ಎಂದು ನನಗೆ ಗೋತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ನ್ಯಾಯಾಲಯದಲ್ಲಿ ಯಾವುದೆಲ್ಲಾ ದಾಖಲೆಗಳನ್ನು ಹಾಜರು ಪಡಿಸಿದ್ದೇವು ಆ ದಾಖಲೆಗಳನ್ನು ವಾಪಸ್ಸು ಪಡೆದುಕೊಂಡಿದ್ದೇವೆ ಎಂದರೆ ಸರಿ, ಸದರಿ ದಾಖಲೆಗಳನ್ನು ಈ ನ್ಯಾಯಾಲಯದಲ್ಲಿ ಹಾಜರು ಪಡಿಸಿದ್ದೇವೆ ಎಂದರೆ ಸರಿ. ಹಾಗಾಗಿ ಆ ನ್ಯಾಯಾಲಯದಿಂದ ಎಲ್ಲಾ ದಾಖಲೆಗಳನ್ನು ವಾಪಸ್ಸು ಪಡೆದು ಇಲ್ಲಿ ಹಾಜರು ಪಡಿಸಲಾಗಿದೆ ಎಂದರೆ ಸರಿ. ಹಾಗೆ ಹಾಜರು ಪಡಿಸಿದ ದಾಖಲೆಗಳಲ್ಲಿ ದಾವಾ ಆಸ್ತಿ ನಮಗೆ ಸೇರಿದ್ದು ಎಂದು ತೋರಿಸಲು ಯಾವುದೆ ಆಸ್ತಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಮಗೆ ಯಾವುದೆ ಹಕ್ಕು ಸ್ವಾಧೀನ ಇಲ್ಲದಿದ್ದರೂ ವಾದಿಗಳಿಗೆ ಮೋಸ ಮಾಡಲು ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1256/16 ರ ಸ್ವತ್ತಿಗೆ ನಿಡಿ. 34 ರಲ್ಲಿ ತೋರಿಸುವ ಚಕ್ಕುಬಂದಿ ಸರಿ ಇದೆಯಾ ಅಥವಾ ನಾನು ಮೇಲೆ ಹೇಳಿದ ಚಕ್ಕುಬಂದಿ ಸರಿ ಇದೆಯಾ ಎಂದರೆ ಸಾಕ್ಷಿ ವಕೀಲರು ಸೂಚಿಸಿದ ಚಕ್ಕುಬಂದಿ ಸರಿ ಇದೆ ಎಂದು ನುಡಿಯುತ್ತಾರೆ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.